ಅ)	ಪ್ರಸಕ್ತ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಯಾವುದಾದರೂ ಯೋಜನೆಗಳನ್ನು ಶಿವಮೊಗ್ಗ ನಗರಕ್ಕೆ ರೂಪಿಸಲಾಗಿದೆಯೇ; ಅವು ಯಾವುವು; ಯಾವಾಗ ಕಾಮಗಾರಿ ಆರಂಭಿಸಲಾಗುವುದು (ಪೂರ್ಣ ವಿವರ ನೀಡುವುದು)?	ಪ್ರಸಕ್ತ ಸಾಲಿನಲ್ಲಿ ಶಿವಮೊಗ್ಗ ನಗರದಲ್ಲಿರುವ ಶಿವಪ್ಪನಾಯಕನ ಕೋಟೆ ಪ್ರದೇಶದಲ್ಲಿರುವ ಹಳೆಯ ಶೌಚಾಲಯವನ್ನು ನೆಲಸಮ ಮಾಡಿ ನೂತನ ಶೌಚಾಲಯವನ್ನು ರೂ.30.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಮಂಜೂರಾತಿ ನೀಡಲಾಗಿದೆ. ಸದರಿ ಅನುದಾನವನ್ನು ಅನುಷ್ಠಾನ ಸಂಸ್ಥೆಯಾದ ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.

ಸಂಖ್ಯೆ: ಪ್ರಇ 131 ಪ್ರವಾವಿ 2018

(ಸಾ.ರಾ.ಮಹೇಶ್)
ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಹಿಂವಕ 1240 ಬಿಸಿಎ/ಬಿಇಟಿ/ಬಿಎಂಎಸ್ 2018

ಕರ್ನಾಟಕ ಸರ್ಕಾರ ಸಚಿವಾಲಯ,
ಸುವರ್ಣಸೌಧ,
ಬೆಳಗಾವಿ, ದಿನಾಂಕ: 13-12-2018

211
14/12/18

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಸುವರ್ಣಸೌಧ, ಬೆಳಗಾವಿ.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು,
ಸುವರ್ಣಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:	ಶ್ರೀ/ಶ್ರೀಮತಿ ಟಿ. ಸುನೀಲ್ ಕುಮಾರ್, ಮಾನ್ಯ ವಿಧಾನಸಭೆ/ವಿಧಾನ ಪರಿಷತ್ತು ಸದಸ್ಯರು ಇವರ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ/ನಿಯಮ ಪ್ರಶ್ನೆ ಸಂಖ್ಯೆ: 1456 ಕ್ಕೆ ಉತ್ತರಿಸುವ ಕುರಿತು.
ಉಲ್ಲೇಖ:	ಪ್ರಶಾವಿಸ/15ನೇವಿಸ/2ಅ/ಪ್ರ.ಸಂ.1456/2018, ದಿನಾಂಕ: 02.12.2018,

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶ್ರೀ/ಶ್ರೀಮತಿ ಟಿ. ಸುನೀಲ್ ಕುಮಾರ್ (ಕಾರ್ಕಳ) ಮಾನ್ಯ ವಿಧಾನ ಸಭೆ/ವಿಧಾನ ಪರಿಷತ್ತು ಸದಸ್ಯರು ಇವರ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ/ ನಿಯಮ ಪ್ರಶ್ನೆ ಸಂಖ್ಯೆ: 1456ಕ್ಕೆ ಸಂಬಂಧಿಸಿದ ಉತ್ತರದ 250 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

SNKale
(ಎಸ್.ಎನ್. ಕಲಾವತಿ),
ಸರ್ಕಾರದ ಅಧೀನ ಕಾರ್ಯದರ್ಶಿ-1,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1456
ಮಾನ್ಯ ಸದಸ್ಯರ ಹೆಸರು	ಶ್ರೀ ವಿ.ಸುನೀಲ್ ಕುಮಾರ್ (ಕಾರ್ಕಳ)
ಉತ್ತರಿಸಬೇಕಾದ ದಿನಾಂಕ	14.12.2018
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	ಸಾಮಾಜಿಕ ಹಾಗೂ ಆರ್ಥಿಕವಾಗಿ ಶೈಕ್ಷಣಿಕ ಅಭಿವೃದ್ಧಿಗೆ ಸರ್ಕಾರವೇ ನಿರ್ಮಿಸಿಕೊಟ್ಟಿರುವ ವಿದ್ಯಾರ್ಥಿ ನಿಲಯಗಳು ಅವ್ಯವಸ್ಥೆಯ ಆಗರವಾಗಿರುವ ಬಗ್ಗೆ ಮಾಧ್ಯಮಗಳಲ್ಲಿ ನಿರಂತರವಾಗಿ ವರದಿಯಾಗುತ್ತಿದ್ದರೂ ಇದನ್ನು ಸರಿಪಡಿಸುವಲ್ಲಿ ಇಲಾಖೆಯ ವೈಫಲ್ಯಕ್ಕೆ ಕಾರಣಗಳೇನು;	ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹೊಸ ವಿದ್ಯಾರ್ಥಿ ನಿಲಯಗಳನ್ನು ಮಂಜೂರಾತಿ ನೀಡಿ ತಕ್ಷಣವೇ ಪ್ರಾರಂಭಿಸಬೇಕಿರುವ ಪ್ರಯುಕ್ತ, ಕೆಲವೊಂದು ನಿಲಯಗಳನ್ನು ಬಾಡಿಗೆ ಕಟ್ಟಡಗಳಲ್ಲಿ ಪ್ರಾರಂಭ ಮಾಡುವುದರಿಂದ ಶೌಚಾಲಯ, ಸ್ನಾನದಗೃಹ ಹಾಗೂ ಇತರೆ ಮೂಲಭೂತ ಸೌಲಭ್ಯಗಳ ಕೊರತೆ ಇರುತ್ತದೆ. ನಿವೇಶನ ಲಭ್ಯತೆಯ ಅನುಸಾರ ಬಾಡಿಗೆ ಕಟ್ಟಡಗಳಲ್ಲಿರುವ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸುವಾಗ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆಗನುಗುಣವಾಗಿ ಅವಶ್ಯಕತೆಗೆ ತಕ್ಕಂತೆ ಶೌಚಾಲಯ ಹಾಗೂ ಸ್ನಾನಗೃಹಗಳನ್ನು ನಿರ್ಮಿಸುವುದರ ಜೊತೆಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ವಿದ್ಯಾರ್ಥಿನಿಲಯಗಳಲ್ಲಿರುವ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ರಾಜ್ಯಮಟ್ಟದ / ಜಿಲ್ಲಾಮಟ್ಟದ ಅಧಿಕಾರಿಗಳು ವಿದ್ಯಾರ್ಥಿನಿಲಯಕ್ಕೆ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ನಡೆಸಿ, ವಿದ್ಯಾರ್ಥಿನಿಲಯಗಳು / ನಿಲಯಾರ್ಥಿಗಳಿಗೆ ದೊರಕಬೇಕಾದ ಸೌಲಭ್ಯಗಳನ್ನು ಕಲ್ಪಿಸಲು ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ಕ್ರಮವಹಿಸಲಾಗುತ್ತಿದೆ.
ಆ	ಭವಿಷ್ಯದ ಪ್ರಜೆಗಳನ್ನು ರೂಪಿಸಬೇಕಾದ ವಿದ್ಯಾರ್ಥಿನಿಲಯಗಳು ಭ್ರಷ್ಟಾಚಾರದ ರೂಪವಾಗಿರುವ ಬಗ್ಗೆ ಮಾಧ್ಯಮಗಳ ವರದಿಯನ್ನು ಆಧರಿಸಿ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಲ್ಲಿ ಇರುವ ತೊಡಕುಗಳೇನು;	ಸರ್ಕಾರದ ಮಾರ್ಗಸೂಚಿ/ನಿಯಮಗಳನ್ವಯ ವಿದ್ಯಾರ್ಥಿನಿಲಯಗಳನ್ನು ಸರಿಯಾಗಿ ನಿರ್ವಹಣೆ ಮಾಡದಿರುವುದು ಹಾಗೂ ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ಸೌಲಭ್ಯಗಳನ್ನು ನಿಯಮಾನುಸಾರ ಕಲ್ಪಿಸದೇ ಯಾವುದೇ ಭ್ರಷ್ಟಾಚಾರದಲ್ಲಿ ಭಾಗಿಯಾದಂತಹ ಅಧಿಕಾರಿ / ನೌಕರರ ಮೇಲೆ ಶಿಸ್ತು ಕ್ರಮವನ್ನು ಜರುಗಿಸಲು ಕ್ರಮವಹಿಸುವುದರೊಂದಿಗೆ ವಿದ್ಯಾರ್ಥಿನಿಲಯಗಳ ಸಮರ್ಪಕ ನಿರ್ವಹಣೆಗೆ ಕ್ರಮವಹಿಸಲಾಗಿದೆ.
ಇ	ವಾರ್ಷಿಕ ಎಷ್ಟು ಮೊತ್ತದ ಹಣ ಹಾಸ್ಟೆಲ್ ವಿದ್ಯಾರ್ಥಿಗಳಿಗಾಗಿ ವಿನಿಯೋಗಿಸಲಾಗುತ್ತಿದೆ; ಈ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ;	2018-19ನೇ ಸಾಲಿನಲ್ಲಿ ಒಟ್ಟು ರೂ.73111.63 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಈ ಅನುದಾನವನ್ನು 2438 ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ವಿನಿಯೋಗಿಸಲಾಗುತ್ತಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳ ವಿವರಗಳನ್ನು www.backwardclasses.kar.nic.in ರಲ್ಲಿ ಲಭ್ಯವಿದೆ.

ಈ	ರಾಜ್ಯದಲ್ಲಿರುವ ಹಾಸ್ಟೆಲ್‌ಗಳಲ್ಲಿ ಶೌಚಾಲಯ, ಸ್ನಾನಗೃಹ ಹಾಗೂ ಇತರ ವ್ಯವಸ್ಥೆ ಸರಿಯಾಗಿ ಇಲ್ಲದಿರುವುದನ್ನು ಇಲಾಖೆ ಗಮನಿಸಿದೆಯೇ; ರಾಜ್ಯದ ಎಷ್ಟು ಹಾಸ್ಟೆಲ್‌ಗಳಲ್ಲಿ ಈ ಸಮಸ್ಯೆಗಳಿರುತ್ತವೆ (ಸಂಪೂರ್ಣ ವಿವರಗಳನ್ನು ಒದಗಿಸುವುದು)?	ಹೌದು. ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ವಿದ್ಯಾರ್ಥಿನಿಲಯಗಳಲ್ಲಿ ಶೌಚಾಲಯ, ಸ್ನಾನಗೃಹ ಹಾಗೂ ಇತರೆ ಮೂಲಭೂತ ಸೌಕರ್ಯಗಳ ಕೊರತೆ ಇರುತ್ತದೆ. ಶೌಚಾಲಯ, ಸ್ನಾನಗೃಹ ಹಾಗೂ ಇತರೆ ಮೂಲಭೂತ ಸೌಕರ್ಯಗಳು ಕೊರತೆ ಇರುವ ವಿದ್ಯಾರ್ಥಿನಿಲಯಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಸಂ: ಹಿಂವಕ 1240 ಬಿಎಂಎಸ್ 2018

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ವಿಧಾನ ಸಭಾ ಮಾನ್ಯ ಸದಸ್ಯರಾದ ಶ್ರೀ ವಿ.ಸುನೀಲ್ ಕುಮಾರ್ (ಕಾರ್ಕಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1456ರ (ಈ) ಗೆ ಅನುಬಂಧ-2

ಕ್ರ.ಸಂ	ಜಿಲ್ಲೆ	ಒಟ್ಟು ವಿದ್ಯಾರ್ಥಿ ನಿಲಯಗಳ ಸಂಖ್ಯೆ	ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ	ಪ್ರಸ್ತುತ ಇರುವ ವಾಸದ ಕೊಠಡಿಗಳ ಸಂಖ್ಯೆ	ಕೊರತೆ ಇರುವ ವಾಸದ ಕೊಠಡಿಗಳ ಸಂಖ್ಯೆ	ಇರುವ ಶೌಚಾಲಯಗಳ ಸಂಖ್ಯೆ	ಕೊರತೆ ಇರುವ ಶೌಚಾಲಯಗಳ ಸಂಖ್ಯೆ	ಇರುವ ಸ್ನಾನ ಗೃಹಗಳ ಸಂಖ್ಯೆ	ಕೊರತೆ ಇರುವ ಸ್ನಾನ ಗೃಹಗಳ ಸಂಖ್ಯೆ	ಸೋಲಾರ್ ವಾಟರ್ ಹೀಟರ್ ಕಲ್ಪಿಸಿರುವ ವಿ.ನಿ ಗಳ ಸಂಖ್ಯೆ	ಸೋಲಾರ್ ವಾಟರ್ ಹೀಟರ್ ಕಲ್ಪಿಸದಿರುವ ವಿ.ನಿ ಗಳ ಸಂಖ್ಯೆ	ವಾಟರ್ ಫಿಲ್ಟರ್ ಕಲ್ಪಿಸಿರುವ ವಿ.ನಿ ಗಳ ಸಂಖ್ಯೆ	ವಾಟರ್ ಫಿಲ್ಟರ್ ಕಲ್ಪಿಸದಿರುವ ವಿ.ನಿ ಗಳ ಸಂಖ್ಯೆ	ಸೋಲಾರ್ ಲೈಟ್ ಇರುವ ವಿ.ನಿ ಗಳ ಸಂಖ್ಯೆ	ಸೋಲಾರ್ ಲೈಟ್ ಇಲ್ಲದಿರುವ ವಿ.ನಿ ಗಳ ಸಂಖ್ಯೆ	ಪಠ್ಯ-ಪುಸ್ತಕ ಮತ್ತು ಲೇಖನ ಸಾಮಗ್ರಿ ಒದಗಿಸಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ	ಪಠ್ಯ-ಪುಸ್ತಕ ಮತ್ತು ಲೇಖನ ಸಾಮಗ್ರಿ ಒದಗಿಸದಿರುವ ವಿದ್ಯಾರ್ಥಿಗಳ ಸಂಖ್ಯೆ	ಕಂಪ್ಯೂಟರ್ ಜೊತೆ ಇಂಟರ್‌ನೆಟ್ ಸೌಲಭ್ಯ ಇರುವ ವಿ.ನಿ. ಗಳ ಸಂಖ್ಯೆ	ಕಂಪ್ಯೂಟರ್ ಜೊತೆ ಇಂಟರ್‌ನೆಟ್ ಸೌಲಭ್ಯ ಇಲ್ಲದಿರುವ ವಿ.ನಿ. ಗಳ ಸಂಖ್ಯೆ	ಯು.ಪಿ.ಎಸ್. ಅಳವಡಿಸಿರುವ ವಿ.ನಿ ಗಳ ಸಂಖ್ಯೆ	ಯು.ಪಿ.ಎಸ್ ಅಳವಡಿಸದೇ ಇರುವ ವಿ.ನಿ ಗಳ ಸಂಖ್ಯೆ	ಗ್ರಂಥಾಲಯ ವ್ಯವಸ್ಥೆ ಇರುವ ವಿ.ನಿ ಗಳ ಸಂಖ್ಯೆ	ಗ್ರಂಥಾಲಯ ವ್ಯವಸ್ಥೆ ಇಲ್ಲದಿರುವ ವಿ.ನಿ ಗಳ ಸಂಖ್ಯೆ	ಸಿ.ಸಿ ಕ್ಯಾಮರಾ ಅಳವಡಿಸಿರುವ ವಿ.ನಿ ಗಳ ಸಂಖ್ಯೆ	ಸಿ.ಸಿ ಕ್ಯಾಮರಾ ಅಳವಡಿಸದಿರುವ ವಿ.ನಿ ಗಳ ಸಂಖ್ಯೆ	ಕ್ರೀಡಾ ಸಾಮಗ್ರಿಗಳನ್ನು ಒದಗಿಸಿರುವ ವಿ.ನಿ. ಗಳ ಸಂಖ್ಯೆ	ಕ್ರೀಡಾ ಸಾಮಗ್ರಿಗಳನ್ನು ಒದಗಿಸದೇ ಇರುವ ವಿ.ನಿ ಗಳ ಸಂಖ್ಯೆ
1	ಬಾಗಲಕೋಟೆ	82	6975	820	143	560	127	535	132	73	11	75	7	34	49	2691	0	76	6	74	7	64	15	53	25	58	18
2	ಬಳ್ಳಾರಿ	103	8650	962	238	666	449	648	441	43	68	73	28	13	76	3668	0	103	0	85	18	52	51	61	42	90	13
3	ಬೆಳಗಾವಿ	156	11050	1181	145	885	164	810	221	86	70	98	58	82	74	5386	686	132	24	127	27	110	46	76	80	80	76
4	ಬೆಂಗಳೂರು (ಗ್ರಾ)	32	2175	206	29	196	25	177	39	32	2	33	2	9	23	600	0	32	0	32	2	27	0	13	19	16	16
5	ಬೆಂಗಳೂರು (ನಗರ)	51	4715	650	42	490	81	493	33	44	7	51	0	20	31	165	0	51	0	51	0	51	0	51	0	51	0
6	ಬೀದರ್	77	3907	880	23	416	23	383	33	66	10	75	1	76	0	2455	0	76	0	76	0	76	0	14	62	76	0
7	ಚಾಮರಾಜನಗರ	31	2470	266	68	206	32	174	31	26	3	29	2	23	24	535	0	30	0	14	16	30	0	17	1	30	0
8	ಚಿಕ್ಕಬಳ್ಳಾಪುರ	58	4375	425	99	389	38	342	63	56	2	58	0	21	37	2467	4	58	0	58	0	49	9	26	29	58	0
9	ಚಿಕ್ಕಮಗಳೂರು	100	7440	635	16	659	0	596	0	99	0	99	0	90	9	2822	0	99	0	99	0	99	0	46	49	99	0
10	ಚಿತ್ರದುರ್ಗ	101	8045	376	80	204	22	202	30	34	0	34	0	34	0	330	0	34	0	26	8	14	20	13	21	34	0
11	ದಕ್ಷಿಣ ಕನ್ನಡ	73	6125	795	178	738	89	702	86	55	18	67	5	65	7	1031	0	68	4	56	17	50	20	69	4	35	38
12	ದಾವಣಗೆರೆ	92	7385	428	68	369	66	343	73	74	18	87	4	50	41	1444	4023	79	12	84	9	38	55	57	34	36	47
13	ಧಾರವಾಡ	67	5420	665	96	739	67	759	100	48	19	67	0	51	16	1996	1237	0	67	0	66	1	59	8	0	67	0
14	ಗದಗ	62	4823	574	78	486	72	469	76	42	20	48	11	36	25	1878	51	61	1	52	10	51	11	41	21	55	6
15	ಹಾಸನ	116	8565	952	55	910	41	756	58	102	14	109	7	105	11	3287	1922	116	0	106	10	116	0	55	61	113	3
16	ಹಾವೇರಿ	75	5600	575	56	489	44	459	49	67	8	75	0	37	30	1587	363	73	0	60	6	58	6	23	46	75	0
17	ಕಲಬುರಗಿ	128	9530	1281	21	657	6	680	6	40	88	128	0	0	128	3930	0	128	0	128	0	108	20	50	78	128	0
18	ಕೊಡಗು	38	2655	231	40	226	38	212	33	36	2	37	1	32	6	609	561	38	0	36	2	37	1	26	12	38	0
19	ಕೋಲಾರ	60	4551	380	107	313	100	304	69	34	4	33	26	3	56	1401	0	58	1	50	9	6	53	5	54	13	46
20	ಕೊಪ್ಪಳ	67	5470	430	75	475	61	361	93	58	11	61	5	45	22	4015	0	67	0	63	4	58	9	44	23	67	0
21	ಮಂಡ್ಯ	109	8160	731	162	589	108	502	160	104	5	103	6	29	80	3761	0	109	0	102	7	109	0	54	55	109	0
22	ಮೈಸೂರು	92	7013	538	101	502	76	422	103	88	4	88	1	113	45	992	0	98	2	90	4	92	1	93	1	91	3
23	ರಾಯಚೂರು	68	5265	422	149	286	144	271	176	37	32	41	16	51	14	1548	1277	39	19	43	14	43	14	22	27	36	21
24	ರಾಮನಗರ	47	3288	293	30	308	29	265	36	40	7	46	1	17	30	301	4	47	0	38	9	36	3	16	31	46	0
25	ಶಿವಮೊಗ್ಗ	132	10791	1167	200	1052	162	896	166	102	32	125	7	89	41	3190	300	123	8	95	38	121	11	74	54	94	38
26	ತುಮಕೂರು	113	8577	1052	165	17489	88	17460	90	104	8	101	11	85	27	2723	138	112	0	109	3	112	0	42	70	112	0
27	ಉಡುಪಿ	41	3265	252	53	284	60	247	72	22	11	39	2	30	11	878	0	41	0	41	0	37	4	22	11	41	0
28	ಉತ್ತರ ಕನ್ನಡ	101	7181	645	78	621	84	551	94	95	6	96	4	74	19	3571	0	98	2	98	2	93	7	92	8	100	0
29	ವಿಜಯಪುರ	101	7360	905	208	643	193	608	193	39	75	74	40	44	67	3464	474	105	22	69	51	35	206	42	78	55	115
30	ಯಾದಗಿರಿ	65	4590	379	132	310	119	280	113	15	50	30	35	8	57	2390	0	27	38	65	0	43	22	22	43	43	22
	ಒಟ್ಟು	2438	187416	19096	2935	32157	2608	30907	2869	1761	605	2080	280	1366	1056	65115	11040	2178	206	2027	339	1816	643	1227	1039	1946	462

ಕರ್ನಾಟಕ ಸರ್ಕಾರ

ಸಂಖ್ಯೆ:ಪ್ರಇ 130ಪ್ರವಾವಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ
ಬೆಂಗಳೂರು ದಿನಾಂಕ: 03/12/2018

94
14/12/18

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ
ವಿಕಾಸ ಸೌಧ, ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ಸುವರ್ಣ ಸೌಧ, ಬೆಳಗಾವಿ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಎಚ್ ನಾಗೇಶ್ ರವರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1089 ಕ್ಕೆ ಉತ್ತರ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1089 ಕ್ಕೆ ಉತ್ತರದ 350/100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

[ಬಿ.ಎನ್.ಯತಿರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1089
ಮಾನ್ಯ ಸದಸ್ಯರ ಹೆಸರು	:	ಶ್ರೀ ಎಚ್. ನಾಗೇಶ್ (ಮುಳಬಾಗಿಲು)
ವಿಷಯ	:	ಕುರುಡು ಮಲೆ ಪ್ರವಾಸಿ ತಾಣ
ಉತ್ತರಿಸುವ ದಿನಾಂಕ	:	14.12.2018.
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಮುಳಬಾಗಿಲು ತಾಲ್ಲೂಕಿನ ಕುರುಡುಮಲೆ ಗಣಪತಿ ದೇವಸ್ಥಾನ ಜಗತ್ ಪ್ರಸಿದ್ದಿ ಪಡೆದಿದ್ದು, ಪ್ರತಿ ದಿನ ಸಾವಿರಾರು ಭಕ್ತಾದಿಗಳು ಶ್ರೀ ಕ್ಷೇತ್ರಕ್ಕೆ ಭೇಟಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಬಂದಿದ್ದಲ್ಲಿ, ಕುರುಡುಮಲೆ ಶ್ರೀಕ್ಷೇತ್ರವನ್ನು ಪ್ರವಾಸಿ ತಾಣವಾಗಿ ಘೋಷಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು;	ಕುರುಡುಮಲೆ ಶ್ರೀಕ್ಷೇತ್ರವನ್ನು ಪ್ರವಾಸಿ ತಾಣವಾಗಿ ಗುರುತಿಸಲಾಗಿದೆ.
ಇ)	ಶ್ರೀಕ್ಷೇತ್ರವನ್ನು ಪ್ರವಾಸಿ ತಾಣವಾಗಿ ಘೋಷಣೆ ಮಾಡಿ ಮೂಲಭೂತ ಸೌಕರ್ಯ ಕಲ್ಪಿಸಲು ಅನುದಾನ ಮಂಜೂರು ಮಾಡಲಾಗುವುದೇ (ಸಂಪೂರ್ಣ ವಿವರ ಒದಗಿಸುವುದು)?	ಸದರಿ ಕ್ಷೇತ್ರದಲ್ಲಿ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. (1) ಯಾತ್ರಿನಿವಾಸ ನಿರ್ಮಾಣ ರೂ.97.54 ಲಕ್ಷಗಳು (ಪೂರ್ಣಗೊಂಡಿದೆ) (2009-10) (2) ಮುಳುಬಾಗಿಲು ಮುಖ್ಯ ರಸ್ತೆಯಿಂದ (ರಾ.ಹೆ-58) ಕುರುಡುಮಲೆ ವರೆಗೆ ರೂ.200.00 ಲಕ್ಷಗಳಲ್ಲಿ ರಸ್ತೆ ಅಭಿವೃದ್ಧಿಪಡಿಸಿ ಪೂರ್ಣಗೊಳಿಸಲಾಗಿದೆ. (2011-12)

ಸಂಖ್ಯೆ: ಪ್ರಇ 130 ಪ್ರವಾವಿ 2018

(ಸಾ.ರಾ.ಮಹೇಶ್)
ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಪ್ರಇ 12/ ಪ್ರವಾವಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ
ಬೆಂಗಳೂರು, ದಿನಾಂಕ: 13/12/2018

80

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ
ವಿಕಾಸ ಸೌಧ, ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ಸುವರ್ಣ ಸೌಧ, ಬೆಳಗಾವಿ.

U/S
14/12/18

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಪಿ. ಟಿ. ರಾಜೀವ್ ರೆಡ್ಡಿ
_____________ರವರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ
ಪ್ರಶ್ನೆ ಸಂಖ್ಯೆ: 1442 ಕ್ಕೆ ಉತ್ತರ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1442 ಕ್ಕೆ ಉತ್ತರದ 350/100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

[ಬಿ.ಎನ್.ಯತಿರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1442
ಮಾನ್ಯ ಸದಸ್ಯರ ಹೆಸರು	:	ಶ್ರೀ ಜಿ.ಎಚ್.ತಿಪ್ಪಾರೆಡ್ಡಿ (ಚಿತ್ರದುರ್ಗ)
ವಿಷಯ	:	ಚಿತ್ರದುರ್ಗ ಕೋಟೆ ವೀಕ್ಷಣೆ
ಉತ್ತರಿಸುವ ದಿನಾಂಕ	:	14.12.2018.
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಚಿತ್ರದುರ್ಗ ನಗರದ ಐತಿಹಾಸಿಕ ಕೋಟೆ ಸುತ್ತಮುತ್ತ ಪ್ರವಾಸೋದ್ಯಮ ಹಾಗೂ ಪುರಾತತ್ವ ಇಲಾಖೆಯ ವತಿಯಿಂದ ಪ್ರವಾಸಿಗರನ್ನು ಸೆಳೆಯಲು ಯಾವ ರೀತಿಯ ಯೋಜನೆಯನ್ನು ಕೈಗೊಳ್ಳಲಾಗಿದೆ;	ಚಿತ್ರದುರ್ಗ ನಗರದ ಐತಿಹಾಸಿಕ ಕೋಟೆ ಹಾಗೂ ಅದರ ಸುತ್ತಮುತ್ತ ಕೆಳಕಂಡ ಪ್ರವಾಸಿ ಸೌಲಭ್ಯಗಳನ್ನು ಪ್ರವಾಸೋದ್ಯಮ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ.
ಆ)	ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ಒದಗಿಸುವುದು)	

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ
1	ಐತಿಹಾಸಿಕ ಚಂದ್ರವಳ್ಳಿಯಲ್ಲಿ ಪ್ರದೇಶದಲ್ಲಿ ಮೂಲ ಸೌಲಭ್ಯಗಳಾದ ಮೆಟ್ಟಿಲು ನಿರ್ಮಾಣ, ಪರಗೋಲ, ಶೌಚಾಲಯ ಸೌಲಭ್ಯಗಳ ಅಭಿವೃದ್ಧಿ ಕಾಮಗಾರಿ. (2015-16)	56.00
2	ಚಿತ್ರದುರ್ಗದಲ್ಲಿ ಕೋಟೆಯ ಮುಂಭಾಗದಲ್ಲಿರುವ ಇಲಾಖಾ ಜಮೀನಿನಲ್ಲಿ ಪ್ರವಾಸಿ ಮಾಹಿತಿ ಕೇಂದ್ರ, ಪಾರ್ಕಿಂಗ್ ಸೌಲಭ್ಯ, ಲಗೇಜ್ ಕೊಠಡಿ, ಕುಡಿಯುವ ನೀರಿನ ಸೌಲಭ್ಯ, ಪ್ರವಾಸಿಗರಿಗೆ ವಿಶ್ರಾಂತಿ ಸೌಲಭ್ಯಗಳ ನಿರ್ಮಾಣ	200.00
3	ಚಿತ್ರದುರ್ಗದಲ್ಲಿರುವ ಸಹಾಯಕ ನಿರ್ದೇಶಕರ ಕಛೇರಿ ಹಾಗೂ ಹೋಟೆಲ್ ಮಯೂರ ಕೆ.ಎಸ್.ಟಿ.ಡಿ.ಸಿ ಗೆ ಕೂಡು ರಸ್ತೆ ಅಭಿವೃದ್ಧಿ.	100.00
4	ಚಿತ್ರದುರ್ಗ ತಾಲ್ಲೂಕು ಮಾರಘಟ್ಟ ಗ್ರಾಮದ ಸರ್ವೆ ನಂ.55 ರಲ್ಲಿರುವ 2 ಎಕರೆ ಜಮೀನಿನಲ್ಲಿ ರಸ್ತೆ ಬದಿ ಸೌಲಭ್ಯ.	600.00
	ಚಿತ್ರದುರ್ಗ ಜಿಲ್ಲೆಯಲ್ಲಿರುವ ಮಾರಘಟ್ಟ ಗ್ರಾಮದ ಸರ್ವೇ ನಂ55 ರಲ್ಲಿರುವ 2 ಎಕರೆ ಇಲಾಖಾ ಜಮೀನಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ರಸ್ತೆ ಬದಿ ಸೌಲಭ್ಯಕ್ಕೆ ಕೌಂಪೌಂಡ್ ನಿರ್ಮಾಣ.	40.00

ಪ್ರಇ 21 ಪ್ರವಾವಿ 2018

(ಸಾ.ರಾ.ಮಹೇಶ್)
ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಪ್ರಇ/32ಪ್ರವಾವಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ
ಬೆಂಗಳೂರು ದಿನಾಂಕ: [illegible]/12/2018

62

14/12/18

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ
ವಿಕಾಸ ಸೌಧ, ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ಸುವರ್ಣ ಸೌಧ, ಬೆಳಗಾವಿ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ ರವರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1036 ಕ್ಕೆ ಉತ್ತರ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1036 ಕ್ಕೆ ಉತ್ತರದ 350/100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

[ಬಿ.ಎನ್.ಯತಿರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1036
ಮಾನ್ಯ ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ವಿಷಯ : ಪ್ರವಾಸೋದ್ಯಮ ಇಲಾಖೆ ಯೋಜನೆಗಳು
ಉತ್ತರಿಸುವ ದಿನಾಂಕ : 14.12.2018
ಉತ್ತರಿಸುವ ಸಚಿವರು : ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2017-18ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಗೆ ನಿಗಧಿಪಡಿಸಿದ್ದ ಅನುದಾನವೆಷ್ಟು; ದಿನಾಂಕ: 31.10.2018ರ ವರೆಗೆ ಇಲಾಖೆಗೆ ಬಿಡುಗಡೆ ಮಾಡಿದ ಅನುದಾನವೆಷ್ಟು ಹಾಗೂ ಖರ್ಚು ಮಾಡಿದ ಅನುದಾನವೆಷ್ಟು;</td><td>2017-18 ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಗೆ ಒದಗಿಸಿದ್ದ ಪರಿಷ್ಕೃತ ಅನುದಾನ ರೂ.463.64ಕೋಟಿ ಆಗಿರುತ್ತದೆ. ದಿನಾಂಕ:01/04/2018 ರಿಂದ 31/10/2018 ರವರೆಗೆ ಇಲಾಖೆಗೆ ಬಿಡುಗಡೆ ಮಾಡಿರುವ ಅನುದಾನ ರೂ.281.58 ಕೋಟಿ ಆಗಿರುತ್ತದೆ. ಖರ್ಚು ಮಾಡಿದ ಅನುದಾನ ರೂ.224.75ಕೋಟಿ ಆಗಿರುತ್ತದೆ.</td></tr>
<tr><td>ಆ)</td><td>2017-18ನೇ ಸಾಲಿನಲ್ಲಿ ಈ ಇಲಾಖೆಯು ಯಾವ ಯಾವ ಯೋಜನೆಗಳನ್ನು ಹಾಕಿಕೊಂಡಿದೆ (ಯೋಜನೆಗಳ ವಿವರ ನೀಡುವುದು);</td><td>2017-18 ನೇ ಸಾಲಿನಲ್ಲಿ ಹಮ್ಮಿಕೊಂಡಿದ್ದ ಯೋಜನೆಗಳ ವಿವರಗಳು ಕೆಳಕಂಡಂತಿವೆ.
1. ರಾಜ್ಯದ ಪ್ರವಾಸಿ ತಾಣಗಳಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸಿಗರನ್ನು ಆಕರ್ಷಿಸುವ ಸಂಬಂಧ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
2. ಎಸ್.ಸಿ&ಎಸ್.ಟಿ ಹಾಗೂ ಹಿಂದುಳಿದ ವರ್ಗಗಳು ಮತ್ತು ಇತರೆ ವರ್ಗದ ಮಕ್ಕಳಿಗೆ ಕರ್ನಾಟಕ ದರ್ಶನ ಕಾರ್ಯಕ್ರಮ.
3. ಎಸ್.ಸಿ&ಎಸ್.ಟಿ ಹಾಗೂ ಹಿಂದುಳಿದ ವರ್ಗಗಳು ಮತ್ತು ಇತರೆ ವರ್ಗದ ನಿರುದ್ಯೋಗಿಗಳಿಗೆ ಪ್ರವಾಸಿ ಟ್ಯಾಕ್ಸಿ ಖರೀದಿಸಲು ಸಹಾಯಧನ.
4. ಹೋಟೆಲ್ ಯೋಜನೆಗಳಿಗೆ ಸಹಾಯಧನ.
5. ಪ್ರವಾಸಿ ತಾಣ ಸಂಪರ್ಕಿಸುವ ರಸ್ತೆಗಳ ಅಭಿವೃದ್ಧಿ
6. ಪ್ರವಾಸಿ ತಾಣಗಳಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಕಾಮಗಾರಿ
7. ಕರ್ನಾಟಕ ಟೂರಿಸಂ ವಿಷನ್ ಗ್ರೂಪ್ ಶಿಫಾರಸ್ಸು ಮಾಡಿರುವ ಯೋಜನೆಗಳು.</td></tr>
<tr><td>ಇ)</td><td>ಬೆಳಗಾವಿ ಜಿಲ್ಲಾ ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರವಾಸೋದ್ಯಮ ಇಲಾಖೆ ಯೋಜನೆಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರ ನೀಡುವುದು?</td><td>2017-18 ನೇ ಸಾಲಿನಲ್ಲಿ ಕಿತ್ತೂರು ತಾಲ್ಲೂಕಿಗೆ ಮಂಜೂರು ಮಾಡಿರುವ ಪ್ರವಾಸಿ ಮೂಲಸೌಲಭ್ಯ ಅಭಿವೃದ್ಧಿ ಕಾಮಗಾರಿಯ ವಿವರ ಕೆಳಗಿನಂತಿದೆ.
<table><tr><th>ಕ್ರ. ಸಂ</th><th>ಕಾಮಗಾರಿಯ ಹೆಸರು</th><th>ಅಂದಾಜು ಮೊತ್ತ</th><th>ಬಿಡುಗಡೆ ಮಾಡಿರುವ ಅನುದಾನ</th><th>ಷರಾ</th></tr><tr><td>1</td><td>ಬೆಳಗಾವಿ ಜಿಲ್ಲೆಯ ಕಿತ್ತೂರು ಮತಕ್ಷೇತ್ರದ ತಿಗಡಿ ಗ್ರಾಮದ ಹೊಳೆದಂಡೆಯ ಶ್ರೀ ಬಸವೇಶ್ವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ</td><td>25.00</td><td>10.00</td><td>ಪ್ರಾರಂಭಿಸಬೇಕಾಗಿದೆ.</td></tr></table></td></tr>
</table>

ಪ್ರಇ 132 ಪ್ರವಾವಿ 2018

(ಸಾ.ರಾ.ಮಹೇಶ್)
ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಪ್ರಇ 115 ಪ್ರವಾವಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ
ಬೆಂಗಳೂರು ದಿನಾಂಕ: 13/12/2018

159
US
14/12/18

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ
ವಿಕಾಸ ಸೌಧ, ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ಸುವರ್ಣ ಸೌಧ, ಬೆಳಗಾವಿ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ವಿರೂಪಾಕ್ಷ ಈಶ್ವರಪ್ಪ ಬಳ್ಳಾರಿ ರವರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1740 ಕ್ಕೆ ಉತ್ತರ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1740 ಕ್ಕೆ ಉತ್ತರದ 350/100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

Yathi Raj

[ಬಿ.ಎನ್.ಯತಿರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1740
ಮಾನ್ಯ ಸದಸ್ಯರ ಹೆಸರು	:	ಶ್ರೀ ಪರಣ್ಣ ಈಶ್ವರಪ್ಪ ಮುನವಳ್ಳಿ (ಗಂಗಾವತಿ)
ವಿಷಯ	:	ಹಂಪಿ ಪ್ರಾಧಿಕಾರದ ಅನುದಾನ
ಉತ್ತರಿಸುವ ದಿನಾಂಕ	:	14/12/2018
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು

ಕ್ರ.ಸ.	ಪ್ರಶ್ನೆ	ಉತ್ತರ
ಅ)	ಹಂಪಿ ಪ್ರಾಧಿಕಾರಕ್ಕೆ ಗಂಗಾವತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಎಷ್ಟು ಗ್ರಾಮಗಳು ಬರುತ್ತವೆ.	ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಗಂಗಾವತಿ ತಾಲ್ಲೂಕಿನಲ್ಲಿ 15 ಗ್ರಾಮಗಳು ಬರುತ್ತವೆ.
ಆ)	ಕಳೆದ 3 ವರ್ಷಗಳಲ್ಲಿ ಈ ಗ್ರಾಮಗಳಿಗೆ ಪ್ರಾಧಿಕಾರದ ವತಿಯಿಂದ ಎಷ್ಟು ಅನುದಾನ ಬಿಡುಗಡೆಯಾಗಿದೆ? (ವಿವರ ಒದಗಿಸುವುದು)	ಕಳೆದ 3 ವರ್ಷಗಳಲ್ಲಿ ಈ ಗ್ರಾಮಗಳಿಗೆ ಪ್ರಾಧಿಕಾರದ ವತಿಯಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಪ್ರಇ 113 ಪ್ರವಾವಿ 2018

(ಸಾ.ರಾ.ಮಹೇಶ್)
ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 584 ಪಕವಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಸುವರ್ಣಸೌಧ,
ಬೆಳಗಾವಿ, ದಿನಾಂಕ: 11 -12-2018

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ,
ಬೆಳಗಾವಿ.

63

U/S 14/12/18

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/~~ಪರಿಷತ್ತು~~,
ಸುವರ್ಣಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ~~ಶ್ರೀ~~/~~ಶ್ರೀಮತಿ~~ ಡಾ|| ಉಮೇಶ ಜಿ. ಜಾಧವ ... ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 99 /~~ನಿಯಮ-73/ /ಗ.ಸೆ.ಸೂ-351~~ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ~~ಶ್ರೀ~~/ಶ್ರೀಮತಿ ಡಾ|| ಉಮೇಶ ಜಿ. ಜಾಧವ ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 99 /~~ನಿಯಮ-73/ /ಗ.ಸೆ.ಸೂ-351~~ಕ್ಕೆ ಸಂಬಂಧಿಸಿದ ಉತ್ತರದ 300 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಪಿ.ಎಸ್.ನಾಗರಾಜ್)
ಶಾಖಾಧಿಕಾರಿ,
ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : **99**
ಸದಸ್ಯರ ಹೆಸರು : ಡಾ|| ಅಂಜಲಿ ಹೇಮಂತ್ ನಿಂಬಾಳ್ಕರ್
ಉತ್ತರಿಸುವ ದಿನಾಂಕ : 14.12.2018
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಲಯಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಂತಹ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಖಾನಾಪೂರ ತಾಲ್ಲೂಕಿನಲ್ಲಿರುವ ವಿದ್ಯಾರ್ಥಿನಿಲಯಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ.
ಆ)	ಬಂದಿದ್ದಲ್ಲಿ, ಈ ವಿದ್ಯಾರ್ಥಿನಿಲಯಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?	

ಸಕಇ 584 ಪಕವಿ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ 134 ಪಸಸೇ 2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು ದಿನಾಂಕ: 11.12.2018

ಇವರಿಂದ :-
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ :-
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ಸುವರ್ಣ ವಿಧಾನ ಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಕೆ.ಎಂ.ಶಿವಲಿಂಗೇಗೌಡರು (ಅರಸೀಕೆರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1797 ಕ್ಕೆ ಉತ್ತರಿಸುವ ಬಗ್ಗೆ.

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಕೆ.ಎಂ.ಶಿವಲಿಂಗೇಗೌಡರು (ಅರಸೀಕೆರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1797 ಕ್ಕೆ ಕನ್ನಡ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎಂ. ಧನಂಜಯ) 11/12/18
ಪೀಠಾಧಿಕಾರಿ-2,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ-ಎ)
11/12/18

ಪ್ರತಿ:

ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ಸುವರ್ಣಸೌಧ, ಬೆಳಗಾವಿ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1797
ಸದಸ್ಯರ ಹೆಸರು	:	ಶ್ರೀ.ಕೆ.ಎಂ.ಶಿವಲಿಂಗೇಗೌಡರು (ವಿಧಾನ ಸಭಾ ಸದಸ್ಯರು) ಅರಸೀಕೆರೆ
ಉತ್ತರಿಸುವ ದಿನಾಂಕ	:	14.12.2018
ಉತ್ತರಿಸುವ ಸಚಿವರು	:	ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದಲ್ಲಿ ಪಶು ವೈದ್ಯಕೀಯ ಸಹಾಯಕರ ಹುದ್ದೆಯಿಂದ ಪಶುವೈದ್ಯಕೀಯ ಪರೀಕ್ಷಕರ ಮತ್ತು ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳಿಗೆ ಬಡ್ತಿ ನೀಡಿದ ನಂತರ ಬಡ್ತಿ ಆದೇಶವನ್ನು ರದ್ದುಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಗೆ ಸಂಬಂಧಿಸಿದಂತೆ ಪಶು ವೈದ್ಯಕೀಯ ಸಹಾಯಕರ ಹುದ್ದೆಯಿಂದ ಪಶುವೈದ್ಯಕೀಯ ಪರೀಕ್ಷಕರ ಮತ್ತು ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳಿಗೆ ಬಡ್ತಿ ನೀಡಿದ ನಂತರ ಬಡ್ತಿ ಆದೇಶವನ್ನು ಸರ್ಕಾರದ ಪತ್ರ ಸಂಖ್ಯೆ: ಪಸಂಮೀ 146 ಪಅಸೇ 2018 ದಿನಾಂಕ: 02.06.2018 ಹಾಗೂ ದಿನಾಂಕ: 04.06.2018ರನ್ವಯ ತಡೆ ಹಿಡಿಯಲಾಗಿದೆ.
ಆ)	ಹಾಗಿದ್ದಲ್ಲಿ, ಒಮ್ಮೆ ಬಡ್ತಿ ನೀಡಿ ಮತ್ತೆ ರದ್ದುಪಡಿಸಲು ಕಾರಣಗಳೇನು:	ಮುಂಬಡ್ತಿಯ ಸಮಯದಲ್ಲಿ ನಡೆದ ಕೆಲವು ಲೋಪದೋಷಗಳನ್ನು ಸರಿಪಡಿಸಲು ಆದೇಶವನ್ನು ತಡೆ ಹಿಡಿಯಲಾಗಿದೆ.
ಇ)	ಮುಂದಿನ ದಿನಗಳಲ್ಲಿ ಬಡ್ತಿ ನೀಡುವ ಉದ್ದೇಶ ಸರ್ಕಾರಕ್ಕಿದೆಯೇ: ಯಾವಾಗ ಕ್ರಮ ವಹಿಸಲಾಗುವುದು?	ನಿಯಮಾನುಸಾರ ಪರಿಶೀಲಿಸಿದ ನಂತರ ಕ್ರಮ ವಹಿಸಲಾಗುವುದು.

ಸಂ: ಪಸಂಮೀ 134 ಪಸಸೇ 2018

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ 187 ಸಲೆವಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು ದಿನಾಂಕ: 11.12.2018

ಇವರಿಂದ :-
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ :-
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ಸುವರ್ಣ ವಿಧಾನ ಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಸಿದ್ದು ಸವದಿ (ತೇರದಾಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1017 ಕ್ಕೆ ಉತ್ತರಿಸುವ ಬಗ್ಗೆ.

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಸಿದ್ದು ಸವದಿ (ತೇರದಾಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1017 ಕ್ಕೆ ಕನ್ನಡ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

11/12/18

(ಎಂ. ಧನಂಜಯ)
ಪೀಠಾಧಿಕಾರಿ-2,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ-ಎ)
11/12/18

ಪ್ರತಿ:
ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ಸುವರ್ಣಸೌಧ, ಬೆಳಗಾವಿ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1017
ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ (ತೇರದಾಳ)
ಉತ್ತರಿಸುವ ದಿನಾಂಕ : 14.12.2018
ಉತ್ತರಿಸುವ ಸಚಿವರು : ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	2018 –19ನೇ ಸಾಲಿಗೆ ಪಶು ಸಂಗೋಪನೆ ಇಲಾಖೆಗೆ ಇರುವ ಅನುದಾನವೆಷ್ಟು; ಯಾವ ಯಾವ ಯೋಜನೆಗೆ ಎಷ್ಟು ಮೀಸಲಿಡಲಾಗಿದೆ; ಸಂಪೂರ್ಣ (ಮಾಹಿತಿ ಒದಗಿಸುವುದು)	2018-19 ನೇ ಸಾಲಿಗೆ ಪಶು ಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಗೆ ನಿಗದಿಪಡಿಸಿರುವ ಅನುದಾನ ರೂ 2362.08 ಕೋಟಿ. ಯೋಜನೆವಾರು ಅನುದಾನವನ್ನು **ಅನುಬಂಧ** ದಲ್ಲಿ ನೀಡಲಾಗಿದೆ.
ಆ)	ಈ ವರ್ಷ ಪಶುಸಂಗೋಪನೆ ಇಲಾಖೆಯಿಂದ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ; ಅವುಗಳನ್ನು ಪಡೆಯಲು ಇರುವ ನಿಯಮಾವಳಿಗಳೇನು; (ಕ್ಷೇತ್ರವಾರು ಸಂಪೂರ್ಣ ಮಾಹಿತಿ ಒದಗಿಸುವುದು)	ಪ್ರಸಕ್ತ ಸಾಲಿನಲ್ಲಿ ಪಶು ಸಂಗೋಪನಾ ಇಲಾಖೆಯಿಂದ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಾದ ಹೈನುಗಾರಿಕೆ (ಎರಡು ಹಸು ಅಥವಾ ಎಮ್ಮೆ), ಕುರಿ ಸಾಕಾಣಿಕೆ (10 ಕುರಿ ಅಥವಾ ಮೇಕೆ), ಕರು ಸಾಕಾಣಿಕೆ, ಹಂದಿ ಸಾಕಾಣಿಕೆ, ಸಂಚಾರಿ ಮಾಂಸದ ಮಳಿಗೆ, 500 ಮಾಂಸದ ಕೋಳಿ ಸಾಕಾಣಿಕೆ ಮತ್ತು ಜಾನುವಾರು ವಿಮೆ ಇವುಗಳನ್ನು ಹಮ್ಮಿಕೊಂಡಿದೆ. ಮೇಲ್ಕಂಡ ಕಾರ್ಯಕ್ರಮಗಳ ಸವಲತ್ತನ್ನು ಪಡೆಯಲು ಮಾರ್ಗಸೂಚಿಗಳನ್ನು ರೂಪಿಸಲಾಗಿದೆ. ಫಲಾನುಭವಿಗಳ ಆಯ್ಕೆಗಾಗಿ ಆಯಾ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದು, ಸಮಿತಿಯು ಮೂಲಕ ಆಯ್ಕೆ ಮಾಡಲಾಗುವುದು.
ಇ)	ತೆರದಾಳ ಮತ ಕ್ಷೇತ್ರದಲ್ಲಿ ಪಶು ಆಸ್ಪತ್ರೆಗಳ ಬೇಡಿಕೆ ಇದ್ದು ಈ ವರ್ಷ ಮಂಜೂರು ಮಾಡಲಾಗುವುದೇ: ಪಶು ಆಸ್ಪತ್ರೆ ತೆರೆಯಲು ಇರುವ ನಿಯಮಗಳೇನು? (ಪೂರ್ಣ ಮಾಹಿತಿ ಒದಗಿಸುವುದು)	2018-19 ನೇ ಸಾಲಿನಲ್ಲಿ ನೂತನವಾಗಿ ಪಶು ಚಿಕಿತ್ಸಾಲಯಗಳನ್ನು ತೆರೆಯುವ ಯಾವುದೇ ಕಾರ್ಯಕ್ರಮ ಇರುವುದಿಲ್ಲ. ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನನ್ವಯ ಪ್ರತಿ 5000 ಜಾನುವಾರು ಘಟಕಗಳಿಗೆ ಪಶುವೈದ್ಯರನ್ನೊಳಗೊಂಡ ಕನಿಷ್ಠ ಒಂದು ಪಶುವೈದ್ಯ ಸಂಸ್ಥೆ ಇರಬೇಕಾಗಿರುತ್ತದೆ.

ಸಂ: ಪಸಂಮೀ 137 ಸಲೆವಿ 2018

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು

ಅನುಬಂಧ

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಸಿದ್ದು ಸವದಿ ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: 1017ಕ್ಕೆ

ಕ್ರ. ಸಂ	ಯೋಜನೆಯ ಹೆಸರು	ಮೀಸಲಿಟ್ಟ ಅನುದಾನ (ರೂ.ಲಕ್ಷಗಳಲ್ಲಿ)
1	ನಿರ್ದೇಶನ ಮತ್ತು ಆಡಳಿತ	6610.00
2	ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ	1003.00
3	ಪಶು ಆರೋಗ್ಯ ಸಂಸ್ಥೆ ಮತ್ತು ಪಶುವೈದ್ಯಕೀಯ ಜೈವಿಕ ಮತ್ತು ಚಿಕಿತ್ಸಕ ಪ್ರಯೋಗ ಶಾಲೆ, ಬೆಂಗಳೂರು.	3109.00
4	ನಾಗರೀಕ ಕಾಮಗಾರಿಗಳು	32.00
5	ಜಾನುವಾರು ರೋಗಗಳ ನಿಯಂತ್ರಣ	5846.00
6	ಅಮೃತ್ ಮಹಲ್ ಕಾವಲ್	50.00
7	ಜಾನುವಾರು ಸಾಕಣೆ ಕ್ಷೇತ್ರಗಳು ಮತ್ತು ತರಬೇತಿ	3127.00
8	ಮೈಸೂರಿನ ಪಿಂಜ್ರಾಪೋಲ್ ಮತ್ತು ಇತರೆ ಗೋಶಾಲೆಗಳಿಗೆ ಬೆಂಬಲ	400.00
9	ರಾಜ್ಯ ಕುಕ್ಕುಟ ಸಾಕಣೆ ಕ್ಷೇತ್ರಗಳು	654.00
10	ಕರ್ನಾಟಕ ಕುರಿ ಮತ್ತು ಕುರಿ ಉಣ್ಣೆ ಅಭಿವೃದ್ಧಿ ನಿಗಮ	2475.00
11	ಕುರಿ ಮತ್ತು ಮೇಕೆಗಳ ಆಕಸ್ಮಿಕ ಸಾವಿಗೆ ಕುರಿ ಮಾಲೀಕರಿಗೆ ಅನುಗ್ರಹ ಕೊಡುಗೆ ಯೋಜನೆ	2200.00
12	ಹಂದಿ ಸಂವರ್ಧನೆ ಕ್ಷೇತ್ರಗಳು	157.00
13	ಜಾನುವಾರು ಅಭಿವೃದ್ಧಿ ಫಾರ್ಮ್	2577.00
14	ರಾಷ್ಟ್ರೀಯ ಜಾನುವಾರು ಮಿಷನ್	1666.00
15	ಪಶುವೈದ್ಯಕೀಯ ಶಿಕ್ಷಣ ಮತ್ತು ತರಬೇತಿ	341.00
16	ಪಶುಸಂಗೋಪನೆಯ ಸಂಖ್ಯಾ ಸಂಗ್ರಹ ಮತ್ತು ಪಶು ಸಂಪತ್ತಿನ ಗಣತಿ	237.00
17	ಮಾದರಿ ಸಮೀಕ್ಷೆ ಯೋಜನೆ, ಹಾಲು, ಮೊಟ್ಟೆ ಮತ್ತು ಉಣ್ಣೆ	428.00
18	ಪಶು ಸಂಗೋಪನೆ ಸಂಖ್ಯೆ ಸಂಗ್ರಹ ಮತ್ತು ಪಶುಸಂಪತ್ತಿನ ಗಣತಿ	1.00
19	ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪನೆ	8882.00
20	ಪಶು ಸಂಗೋಪನೆ ಸಹಕಾರಿ ಸಂಘಗಳಿಗೆ ಅನುದಾನಗಳು	650.00
21	ಖಾಲಿ ಹುದ್ದೆಗಳಿಗೆ ಅನುದಾನ	102.00
22	ವೇತನಕ್ಕಾಗಿ ಹೆಚ್ಚುವರಿ ಅನುದಾನ –6ನೇ ವೇತನ ಆಯೋಗ	5119.00
23	ಕರ್ನಾಟಕ ಸೇವಾ ಅಧಿನಿಯಮಗಳ ಖಾತರಿ ಅಡಿಯಲ್ಲಿ ಪಾವತಿಗಳು	50.00
24	ರಾಷ್ಟ್ರೀಯ ದನ ತಳಿ ಸಂವರ್ಧನೆ ಮತ್ತು ಹೈನು ಅಭಿವೃದ್ಧಿ	1.00
25	ಮಹಿಳೆಯರಿಗಾಗಿ ಪಶುಸಂಗೋಪನಾ ಕಾರ್ಯಕ್ರಮ	1101.00
26	ಹಾಲು ಉತ್ಪಾದಕರಿಗೆ ಉತ್ತೇಜನ	120600.00
27	ಆರ್.ಐ.ಡಿ.ಎಫ್ ಯೋಜನೆಯಡಿ ಔಷಧಾಲಯಗಳ ನಿರ್ಮಾಣ	5292.00
28	ಶಿಕ್ಷಣ, ವಿಸ್ತರಣೆ ಮತ್ತು ಸಂಶೋಧನೆ ಕೆ.ವಿ.ಎ.ಎಫ್.ಎಸ್.ಯು. ಬೀದರ್	1606.00
29	ಜಾನುವಾರು ಮತ್ತು ಎಮ್ಮೆ ಅಭಿವೃದ್ಧಿ ಪಶುಭವನ ಮತ್ತು ಇತರೆಕಟ್ಟಡಗಳು	500.00
30	ಕಾರ್ಯಕಾರಿ ಸಿಬ್ಬಂದಿ	8232.86
31	ಔಷಧಿಗಳು ಮತ್ತು ರಸಾಯನಿಕ ಪದಾರ್ಥಗಳು ಮತ್ತು ಸಾಮಗ್ರಿಗಳ ಸರಬರಾಜು	3190.00
32	ಕಟ್ಟಡಗಳ ನಿರ್ವಹಣೆ	1513.00
33	ವಿಸ್ತರಣಾ ಘಟಕಗಳ ಬಲಪಡಿಸುವಿಕೆ	508.00
34	ಜಾನುವಾರು ತಳಿ ಸಂವರ್ಧನಾ ಕೇಂದ್ರ	1.14
35	ಗಿರಿರಾಜ ಹಾಗೂ ಇತರೆ ಹಕ್ಕಿಗಳ ಸಾಕಾಣಿಕೆ	514.00
36	ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ತೆರೆಯುವುದು ಮತ್ತು ಅವುಗಳನ್ನು ತಾಲ್ಲೂಕು ಮಟ್ಟದ ಔಷಧಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವುದು	46773.00
37	ಜೀವ ವೈದ್ಯ ತ್ಯಾಜ್ಯ ವಸ್ತುಗಳ ವಿಲೇವಾರಿ	182.60
38	ಗೊಡ್ಡು/ಬಂಜೆ ಜಾನುವಾರು ಶಿಬಿರಗಳ ವ್ಯವಸ್ಥೆ	477.40
	ಒಟ್ಟು	236208.00

ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ 190 ಸಲೆವಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು ದಿನಾಂಕ: 11.12.2018

ಇವರಿಂದ :-
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ :-
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ಸುವರ್ಣ ವಿಧಾನ ಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಆರ್.ಅಶೋಕ (ಪದ್ಮನಾಭ ನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1423 ಕ್ಕೆ ಉತ್ತರಿಸುವ ಬಗ್ಗೆ.

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಆರ್.ಅಶೋಕ (ಪದ್ಮನಾಭ ನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1423 ಕ್ಕೆ ಕನ್ನಡ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

11/12/18

(ಎಂ. ಧನಂಜಯ)
ಪೀಠಾಧಿಕಾರಿ-2,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ-ಎ)

11/12/18

ಪ್ರತಿ:

ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ಸುವರ್ಣಸೌಧ, ಬೆಳಗಾವಿ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1423
ಸದಸ್ಯರ ಹೆಸರು : ಶ್ರೀ ಆರ್. ಅಶೋಕ (ಪದ್ಮನಾಭ ನಗರ)
ಉತ್ತರಿಸುವ ದಿನಾಂಕ : 14.12.2018
ಉತ್ತರಿಸುವ ಸಚಿವರು : ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಕೆಎಂಎಫ್ ನಿಂದ ಉತ್ಪಾದನೆ ಆಗುತ್ತಿರುವ ಹಾಲಿನಲ್ಲಿ ಕಲಬೆರಕೆ ಹಾಲು ಸೇರಿ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಇಲ್ಲ
ಆ)	ಹಾಗಿದ್ದಲ್ಲಿ, ಕಳೆದ 3 ವರ್ಷಗಳಿಂದ ನಿರಂತರವಾಗಿ ಕೆಎಂಎಫ್ ಹಾಲಿನಲ್ಲಿ ಕಲಬೆರಕೆ ಹಾಲು ವಿತರಣೆ ಮಾಡಿದ ಅಧಿಕಾರಿಗಳ ಮೇಲೆ ಕೈಗೊಂಡ ಕಾನೂನು ಕ್ರಮವೇನು:	ಪ್ರಶ್ನೆ ಉದ್ಭವಿಸುವುದಿಲ್ಲ
ಇ)	ಈ ಕಾರ್ಯದಲ್ಲಿ ಶಾಮೀಲಾಗಿರುವ ಅಧಿಕಾರಿಗಳು ಯಾರು?	ಪ್ರಶ್ನೆ ಉದ್ಭವಿಸುವುದಿಲ್ಲ

ಸಂ: ಪಸಂಮೀ 190 ಸಲೆವಿ 2018

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಸಕಇ 630 [illegible] 2018

ಕರ್ನಾಟಕ ಸರ್ಕಾರದ ಸಚಿವಾಲಯ
ಸುವರ್ಣಸೌಧ,
ಬೆಳಗಾವಿ. ದಿನಾಂಕ: 11-12-2018

<u>ಇವರಿಂದ:</u>

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ,
ಬೆಳಗಾವಿ.

<u>ಇವರಿಗೆ:</u>

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/~~ಪರಿಷತ್ತು~~,
ಸುವರ್ಣಸೌಧ,
ಬೆಳಗಾವಿ.

22

U/S 14/12/18

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ ಅರಬೈಲ್ ಶಿವರಾಮ್ ಹೆಬ್ಬಾರ್ ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ:1443 /~~ನಿಯಮ-73/ /ಗ.ಸೆ.ಸೂ-351~~ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ ಅರಬೈಲ್ ಶಿವರಾಮ್ ಹೆಬ್ಬಾರ್ ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1443 /~~ನಿಯಮ-73/ /ಗ.ಸೆ.ಸೂ-351~~ಕ್ಕೆ ಸಂಬಂಧಿಸಿದ ಉತ್ತರದ 300 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಪಿ.ಎಸ್.ನಾಗರಾಜ್)
ಶಾಖಾಧಿಕಾರಿ,
ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : **1443**
ಸದಸ್ಯರ ಹೆಸರು : ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್
ಉತ್ತರಿಸುವ ದಿನಾಂಕ : 14.12.2018
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯ ವಸತಿ ಶಿಕ್ಷಣ ಸಂಸ್ಥೆಯಲ್ಲಿ 4000ಕ್ಕೂ ಹೆಚ್ಚು ನೌಕರರು ನೇಮಕಾತಿ ಹಾಗೂ ವಿಲೀನಗೊಂಡು ಸೇವಾ ಭದ್ರತೆ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ
ಆ)	ಬಂದಿದ್ದಲ್ಲಿ, ಸರ್ಕಾರ ಇವರುಗಳಿಗೆ ಸೇವಾ ಭದ್ರತೆಯನ್ನು ಒದಗಿಸಲು ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ?	ಉದ್ಭವಿಸುವುದಿಲ್ಲ.

ಸಕಇ 630 ಮೊದೇಶ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 595 ಪ್ರಕೆಬಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಸುವರ್ಣಸೌಧ,
ಬೆಳಗಾವಿ. ದಿನಾಂಕ: 11-12-2018

132

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು.
ಸಮಾಜ ಕಲ್ಯಾಣ ಇಲಾಖೆ.
ಬೆಳಗಾವಿ.

ಇವರಿಗೆ:
ಕಾರ್ಯದರ್ಶಿ.
ಕರ್ನಾಟಕ ವಿಧಾನ ಸಭೆ/~~ಪರಿಷತ್ತು~~.
ಸುವರ್ಣಸೌಧ,
ಬೆಳಗಾವಿ.

ಮಾನ್ಯರೇ.

ವಿಷಯ:- ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ M. ಚಿ. ನಿ ಗಾರ .... ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1074/~~ನಿಯಮ-73/ /ಗ.ಸೆ.ಸೂ-351~~ ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ. ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ M. ಚಿ. ನಿ ಗಾರ .... ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1074 ~~/ನಿಯಮ-73/ /ಗ.ಸೆ.ಸೂ-351~~ಕ್ಕೆ ಸಂಬಂಧಿಸಿದ ಉತ್ತರದ 250 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಪಿ.ಎನ್.ನಾಗರಾಜ್)
ಶಾಖಾಧಿಕಾರಿ,
ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1074
ಸದಸ್ಯರ ಹೆಸರು : ಶ್ರೀ. ಎಂ.ಶ್ರೀನಿವಾಸ್
ಉತ್ತರಿಸುವ ದಿನಾಂಕ : 14.12.2018
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಮಂಡ್ಯ ನಗರಕ್ಕೆ ಬಾಬು ಜಗಜೀವನರಾಮ್ ಸಮುದಾಯ ಭವನ ಮಂಜೂರಾಗಿದ್ದು ಕಾಯಕಲ್ಪ ನೀಡದಿರಲು ಕಾರಣವೇನು?	ಮಂಡ್ಯ ಜಿಲ್ಲಾ ಕೇಂದ್ರದಲ್ಲಿ ಡಾ ಬಾಬು ಜಗಜೀವನರಾಂ ಭವನ ನಿರ್ಮಾಣ ಮಾಡಲು ದಿನಾಂಕ: 7/7/2012 ರಂದು ರೂ.100.00 ಲಕ್ಷಗಳಿಗೆ ಮಂಜೂರಾತಿ ನೀಡಿ, ರೂ.50.00 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಅಲ್ಲದೇ, ನಿವೇಶನ ಖರೀದಿಗಾಗಿ ರೂ. 52.42 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಈ ಭವನದ ಕಾಮಗಾರಿಗೆ ರೂ.380.00 ಲಕ್ಷಗಳ ಪರಿಷ್ಕೃತ ಅಂದಾಜುಪಟ್ಟಿ ತಯಾರಿಸಿದ್ದು, ಇದು ಪರಿಶೀಲನೆಯಲ್ಲಿದೆ.

ಸಕಇ 595 ಪಕವಿ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1764
ಸದಸ್ಯರ ಹೆಸರು : ಡಾ: ಉಮೇಶ್ ಜಿ. ಜಾಧವ್ (ಚಿಂಚೋಳಿ)
ಉತ್ತರಿಸುವ ದಿನಾಂಕ : 14.12.2018
ಉತ್ತರಿಸುವ ಸಚಿವರು : ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಪಶು ಪಾಲನಾ ಇಲಾಖೆಯಲ್ಲಿ ವಿಮೆ ಮಾಡದ ಪಶುಗಳು ಆಕಸ್ಮಿಕ ಮರಣ ಹೊಂದಿದಾಗ ಸರ್ಕಾರದಿಂದ ಪರಿಹಾರ ನೀಡಲಾಗುತ್ತಿದ್ದ ಯೋಜನೆಯನ್ನು ಆಗಸ್ಟ್ 15, 2018 ರಿಂದ ಸ್ಥಗಿತಗೊಳಿಸಲಾಗಿದ್ದು, ರೈತರ ಹಿತದೃಷ್ಟಿಯಿಂದ ಈ ಯೋಜನೆಯನ್ನು ಪುನರ್ ಪ್ರಾರಂಭಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ:	2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಜಾನುವಾರು ವಿಮೆ ಮಾಡದ ಎತ್ತು/ಹಸು/ಕೋಣ/ಹೋರಿ/ಕಡಸುಗಳ ಆಕಸ್ಮಿಕ ಸಾವಿನಿಂದ ಆರ್ಥಿಕ ನಷ್ಟ ಅನುಭವಿಸುವ ರೈತರಿಗೆ ಪರಿಹಾರ ಧನ ಯೋಜನೆಯು ಮಾರ್ಚ್-2019 ಮಾಹೆಯವರೆಗೆ ಚಾಲ್ತಿಯಲ್ಲಿರುತ್ತದೆ. 2018-19ನೇ ಸಾಲಿಗೆ 4226 ರಾಸುಗಳಿಗೆ ಪರಿಹಾರ ಧನ ಒದಗಿಸುವ ನಿಟ್ಟಿನಲ್ಲಿ ತ್ರೈ ಮಾಸಿಕ ಕಂತುಗಳಲ್ಲಿ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, ಈಗಾಗಲೇ ಮೂರು ಕಂತಿನ ಅನುದಾನವು ಬಿಡುಗಡೆಯಾಗಿದ್ದು, ಆಯುಕ್ತಾಲಯಕ್ಕೆ ಸ್ವೀಕೃತವಾಗಿರುವ ಪ್ರಸ್ತಾವನೆಗಳನ್ನು ದಿನಾಂಕವಾರು ಜೇಷ್ಠತೆ ಪ್ರಕಾರ ಇತ್ಯರ್ಥಗೊಳಿಸಲಾಗಿದೆ.
ಆ)	ನೂತನ ಕಾಳಗಿ ತಾಲ್ಲೂಕು ಕೇಂದ್ರದಲ್ಲಿ ಪಶು ವೈದ್ಯಕೀಯ ಆಸ್ಪತ್ರೆ ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ:	ಕಾಳಗಿ ತಾಲ್ಲೂಕಿನ ಕಾಳಗಿಯಲ್ಲಿ ಪಶು ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದೆ.
ಇ)	ನೂತನ ಕಾಳಗಿ ತಾಲ್ಲೂಕು ಕೇಂದ್ರದ ವ್ಯಾಪ್ತಿಯಲ್ಲಿ ಸಂಚಾರಿ ಪಶು ಚಿಕಿತ್ಸಾಲಯಕ್ಕೆ ರೈತರಿಂದ ಬೇಡಿಕೆ ಇದ್ದು, ಸಂಚಾರಿ ಪಶು ಚಿಕಿತ್ಸಾಲಯ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ:	ಸಂಚಾರಿ ಪಶು ಚಿಕಿತ್ಸಾಲಯ ಪ್ರಾರಂಭಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಸಂ: ಪಸಂಮೀ 182 ಸಲೆವಿ 2018

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ 143 ಪಸಸೇ 2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು ದಿನಾಂಕ: 11.12.2018

ಇವರಿಂದ :-
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ :-
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ಸುವರ್ಣ ವಿಧಾನ ಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ದೊಡ್ಡಗೌಡರ ಮಹಾಂತೇಶ ಬಸವಂತರಾಯ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1035 ಕ್ಕೆ ಉತ್ತರಿಸುವ ಬಗ್ಗೆ.

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ದೊಡ್ಡಗೌಡರ ಮಹಾಂತೇಶ ಬಸವಂತರಾಯ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1035 ಕ್ಕೆ ಕನ್ನಡ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

11/12/18

(ಎಂ. ಧನಂಜಯ)
ಪೀಠಾಧಿಕಾರಿ-2,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ-ಎ)

11/12/18

ಪ್ರತಿ:

ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ಸುವರ್ಣಸೌಧ, ಬೆಳಗಾವಿ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1035
ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸುವ ದಿನಾಂಕ : 14.12.2018
ಉತ್ತರಿಸುವ ಸಚಿವರು : ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಸರ್ಕಾರಿ ಪ್ರಾಥಮಿಕ ಪಶು ಚಿಕಿತ್ಸಾಲಯಗಳಿವೆ;</td><td>ಕಿತ್ತೂರು ಮತಕ್ಷೇತ್ರದಲ್ಲಿ ಈ ಕೆಳಕಂಡಂತೆ ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ.
<table>
<tr><th>ಕ್ರ.ಸಂ.</th><th>ಸಂಸ್ಥೆಯ ಹೆಸರು</th><th>ಸಂಖ್ಯೆ</th></tr>
<tr><td>1</td><td>ಪಶು ಆಸ್ಪತ್ರೆ</td><td>02</td></tr>
<tr><td>2</td><td>ಪಶು ಚಿಕಿತ್ಸಾಲಯ</td><td>09</td></tr>
<tr><td>3</td><td>ಪ್ರಾ.ಪಶು ಚಿಕಿತ್ಸಾ ಕೇಂದ್ರ</td><td>13</td></tr>
<tr><td></td><td>ಒಟ್ಟು</td><td>24</td></tr>
</table>
</td></tr>
<tr><td>ಆ)</td><td>ಅವುಗಳಲ್ಲಿ, ಶಿಥಿಲಾವಸ್ಥೆ ತಲುಪಿರುವ ಪ್ರಾಥಮಿಕ ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಸದರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಕೆಳಕಂಡ ಪಶುವೈದ್ಯಕೀಯ ಸಂಸ್ಥೆಗಳು ಶಿಥಿಲಾವಸ್ತೆಯಲ್ಲಿದ್ದು ಹಂತ ಹಂತವಾಗಿ ದುರಸ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.
<table>
<tr><th>ಸಂಸ್ಥೆಯ ಹೆಸರು</th><th>ಗ್ರಾಮ</th></tr>
<tr><td rowspan="5">ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ</td><td>ದೇವರ ಶೀಗಿಹಳ್ಳಿ</td></tr>
<tr><td>ದೇಶನೂರ</td></tr>
<tr><td>ತಿಗಡೊಳ್ಳಿ</td></tr>
<tr><td>ಬೈಲೂರ</td></tr>
<tr><td>ಕಾದ್ರೊಳ್ಳಿ</td></tr>
</table>
</td></tr>
<tr><td>ಇ)</td><td>ಹಾಗಿದ್ದಲ್ಲಿ, ಪ್ರಾಥಮಿಕ ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರದ ಕ್ರಮವೇನು?</td><td>ಪ್ರಸ್ತುತ ರಾಜ್ಯದಲ್ಲಿರುವ 1512 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು 2017-18ನೇ ಸಾಲಿನಿಂದ 2020-21ನೇ ಸಾಲಿನವರೆಗೆ ಹಂತ ಹಂತವಾಗಿ ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 278 ಪಸಸೇ 2016 ದಿನಾಂಕ: 9.10.2017ರನ್ವಯ ಈಗಾಗಲೇ ಕ್ರಮಕೈಗೊಳ್ಳಲಾಗಿದೆ. ಆದ್ಯತೆ ಮೇಲೆ ಕಿತ್ತೂರು ವಿಧಾನ ಸಭಾ ಕ್ಷೇತ್ರದ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಸಹ ಪಶುಚಿಕಿತ್ಸಾಲಯಗಳನ್ನಾಗಿ ಹಂತಹಂತವಾಗಿ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗುವುದು.</td></tr>
</table>

ಸಂ: ಪಸಂಮೀ 143 ಪಸಸೇ 2018

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಹಿಂವಕ 125 ಬಿಸಿಎ/ಬಿಇಟಿ/ಬಿಎಂಎಸ್ 2018

ಕರ್ನಾಟಕ ಸರ್ಕಾರ ಸಚಿವಾಲಯ,
ಸುವರ್ಣಸೌಧ,
ಬೆಳಗಾವಿ. ದಿನಾಂಕ:12-12-2018

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಸುವರ್ಣಸೌಧ, ಬೆಳಗಾವಿ.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು,
ಸುವರ್ಣಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:	ಶ್ರೀ/ಶ್ರೀಮತಿ ಎಂ. ಶ್ರೀನಿವಾಸ (ಮಂಡ್ಯ) ಮಾನ್ಯ ವಿಧಾನಸಭೆ/ ವಿಧಾನ ಪರಿಷತ್ತು ಸದಸ್ಯರು ಇವರ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ/ನಿಯಮ ಪ್ರಶ್ನೆ ಸಂಖ್ಯೆ: 1075 ಕ್ಕೆ ಉತ್ತರಿಸುವ ಕುರಿತು.
ಉಲ್ಲೇಖ:	ಪ್ರಶಾವಿಸ/15ನೇ ವಿಸ/2ಅ/ಪ್ರ.ಸಂ 1075/2018, ದಿನಾಂಕ: 01.12.2018.

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶ್ರೀ/ಶ್ರೀಮತಿ ಎಂ. ಶ್ರೀನಿವಾಸ (ಮಂಡ್ಯ) ಮಾನ್ಯ ವಿಧಾನ ಸಭೆ/ವಿಧಾನ ಪರಿಷತ್ತು ಸದಸ್ಯರು ಇವರ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ/ ನಿಯಮ ಪ್ರಶ್ನೆ ಸಂಖ್ಯೆ: 1075ಕ್ಕೆ ಸಂಬಂಧಿಸಿದ ಉತ್ತರದ 250 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

(ಎಸ್.ಎನ್. ಕಲಾವತಿ).
ಸರ್ಕಾರದ ಅಧೀನ ಕಾರ್ಯದರ್ಶಿ-1,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1075
ಮಾನ್ಯ ಸದಸ್ಯರ ಹೆಸರು	ಶ್ರೀ ಎಂ.ಶ್ರೀನಿವಾಸ್ (ಮಂಡ್ಯ)
ಉತ್ತರಿಸಬೇಕಾದ ದಿನಾಂಕ	14.12.2018
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮಂಡ್ಯ ,ನಗರದಲ್ಲಿ ಡಿ. ದೇವರಾಜ ಅರಸು ಭವನ ನಿರ್ಮಾಣ ಮಾಡಲು ಹಿಂದಿನ ಸರ್ಕಾರ ಘೋಷಿಸಿದ್ದು, ಪ್ರಸ್ತುತ ಇದು ಯಾವ ಹಂತದಲ್ಲಿದೆ; ಇದುವರೆವಿಗೂ ಕಾರ್ಯರೂಪಕ್ಕೆ ಬರದಿರಲು ಕಾರಣವೇನು?	ಮಂಡ್ಯ ನಗರದಲ್ಲಿ ಡಿ. ದೇವರಾಜ ಅರಸು ಭವನ ನಿರ್ಮಾಣಕ್ಕಾಗಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ 2385.00 ಚ.ಮೀ ನಿವೇಶನವನ್ನು ಪಡೆಯಲಾಗಿದ್ದು, ಡಿ. ದೇವರಾಜ ಅರಸು ಭವನವನ್ನು ನಿರ್ಮಿಸಲು ಅನುದಾನದ ಲಭ್ಯತೆಗೆ ಒಳಪಟ್ಟಿರುತ್ತದೆ.

ಸಂ: ಹಿಂವಕ 1251 ಬಿಎಂಎಸ್ 2018

(ಸಿ. ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಸಕಇ 596 ತಕಅ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಸುವರ್ಣಸೌಧ,
ಬೆಳಗಾವಿ, ದಿನಾಂಕ: 12-12-2018

<u>ಇವರಿಂದ:</u>

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ,
ಬೆಳಗಾವಿ.

<u>ಇವರಿಗೆ:</u>

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/~~ಪರಿಷತ್ತು~~,
ಸುವರ್ಣಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~......ವಿಶ್ವನಾಥ್...... ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ:1091 /~~ನಿಯಮ-73/ /ಗ.ಸೆ.ಸೂ-351~~ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~......ವಿಶ್ವನಾಥ್...... ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ:1091 ~~/ನಿಯಮ-73/ /ಗ.ಸೆ.ಸೂ-351ಕ್ಕೆ~~ ಸಂಬಂಧಿಸಿದ ಉತ್ತರದ 300...... ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಪಿ.ಎಸ್.ನಾಗರಾಜ್)
ಶಾಖಾಧಿಕಾರಿ,
ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1091
ಸದಸ್ಯರ ಹೆಸರು : ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ
ಉತ್ತರಿಸುವ ದಿನಾಂಕ : 14.12.2018
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸವದತ್ತಿ ಮತಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಮಂಜೂರಾಗಿರುವ ಡಾ:ಬಿ.ಆರ್ ಅಂಬೇಡ್ಕರ್ / ಡಾ: ಬಾಬು ಜಗಜೀವನರಾಂ ಭವನಗಳ ನಿರ್ಮಾಣ ಇದುವರೆಗೂ ಪ್ರಾರಂಭವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸವದತ್ತಿ ಮತಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ 28 ಭವನಗಳನ್ನು ಮಂಜೂರು ಮಾಡಲಾಗಿದೆ. ಈ ಪೈಕಿ 3 ಭವನಗಳ ಕಾಮಗಾರಿ ಪ್ರಗತಿಯಲ್ಲಿರುತ್ತವೆ. ಉಳಿದ 25 ಭವನಗಳ ಪೈಕಿ 18 ಭವನಗಳಿಗೆ ನಿವೇಶನ ದಾಖಲಾತಿಗಳೊಂದಿಗೆ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವ ಸ್ವೀಕೃತಿಯಾಗಿದ್ದು, ಈ ಭವನಗಳ ನಿರ್ಮಾಣಕ್ಕೆ ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡಲಾಗುವುದು.
ಆ)	ಬಂದಿದ್ದಲ್ಲಿ, ಈ ಭವನಗಳಿಗೆ ಅನುದಾನ ಬಿಡುಗಡೆ ವಿಳಂಬವಾಗಲು ಕಾರಣವೇನು; ಅನುದಾನ ನೀಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಮಂಜೂರಾದ 25 ಭವನಗಳ ಪೈಕಿ 18 ಭವನಗಳಿಗೆ ಇತ್ತೀಚಿಗೆ ನಿವೇಶನ ಪಡೆಯಲಾಗಿದ್ದು, ಸದರಿ ಭವನಗಳಿಗೆ ಅನುದಾನ ಬಿಡುಗಡೆ ಮಾಡಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಉಳಿದ 7 ಭವನಗಳಿಗೆ ನಿವೇಶನ ಲಭ್ಯವಾದ ನಂತರ ಅನುದಾನ ಲಭ್ಯತೆಗನುಗುಣವಾಗಿ ಕಾಮಗಾರಿ ಪ್ರಾರಂಭಿಸಲಾಗುವುದು.
ಇ)	ಯಾವ ಕಾಲಮಿತಿಯೊಳಗೆ ಅನುದಾನ ಬಿಡುಗಡೆ ಮಾಡಿ, ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು? (ವಿವರ ಒದಗಿಸುವುದು)	

ಸಕಇ 596 ಪಕವಿ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 99 ಆರ್‌ಇಹೆಚ್ 2018.

ಕರ್ನಾಟಕ ಸರ್ಕಾರ ಸಚಿವಾಲಯ,
ಸುವರ್ಣ ವಿಧಾನಸೌಧ,
ಬೆಳಗಾವಿ.ದಿನಾಂಕ:12.12.2018.

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ,
ಬೆಳಗಾವಿ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ಸುವರ್ಣ ವಿಧಾನಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಬೀಳಗಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1453 ಕ್ಕೆ ಉತ್ತರಿಸುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಬೀಳಗಿ) ಮಾನ್ಯ ವಿಧಾನ ಸಭಾ ಸದಸ್ಯರು, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1453 ಕ್ಕೆ ಸಂಬಂಧಿಸಿದಂತೆ, ಉತ್ತರವನ್ನು ಸಿದ್ಧಪಡಿಸಿ 250 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಕೆ.ಆರ್. ರವಿಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ-1 (ಪ್ರ),
ಕಂದಾಯ ಇಲಾಖೆ (ಪು & ಪು).
ದೂರವಾಣಿ ಸಂಖ್ಯೆ:080-22032691
email: sorevenuereh@gmail.com

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಬೀಳಗಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1453
ಉತ್ತರಿಸುವ ಸಚಿವರು	:	ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು
ಉತ್ತರಿಸಬೇಕಾದ ದಿನಾಂಕ	:	14.12.2018 (ಪ್ರವಾಸೋದ್ಯಮ ಇಲಾಖೆಯಿಂದ ವರ್ಗಾವಣೆಗೊಂಡ ಪ್ರಶ್ನೆ)

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಬಾಗಲಕೋಟ ಜಿಲ್ಲೆಯ ಕೂಡಲಸಂಗಮದಲ್ಲಿ ದೆಹಲಿಯ ಅಕ್ಷರಧಾಮದಂತೆ ಶ್ರೀ ಜಗಜ್ಯೋತಿ ಬಸವೇಶ್ವರ ಜೀವನಾಧಾರಿತ ಅಂತರಾಷ್ಟ್ರೀಯ ಕಲಾತ್ಮಕ ಸಂಗ್ರಹಾಲಯ ನಿರ್ಮಿಸಿ, ಅಂತರಾಷ್ಟ್ರೀಯ ಪ್ರವಾಸಿ ತಾಣವನ್ನಾಗಿ ನಿರ್ಮಾಣ ಮಾಡುವ ಯೋಜನೆಯು ಪ್ರಾರಂಭವಾಗಿದೆಯೇ; ಇಲ್ಲವಾದಲ್ಲಿ ವಿಳಂಬಕ್ಕೆ ಕಾರಣಗಳೇನು.	ಹೌದು. ಯೋಜನೆಯನ್ನು ಪ್ರಾರಂಭಿಸಲಾಗಿದೆ. ಟೆಂಡರ್ ಪ್ರಕ್ರಿಯೆಗಳ ಮೂಲಕ ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ.
ಆ	ಈ ಯೋಜನೆಗೆ ಮಂಜೂರಾದ ಅನುದಾನವೆಷ್ಟು; ಇಲ್ಲಿಯವರೆಗೂ ಎಷ್ಟು ಹಣ ಬಿಡುಗಡೆಯಾಗಿದೆ;	ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯ 12ನೇ ಸಭೆಯಲ್ಲಿ ಕೂಡಲ ಸಂಗಮದಲ್ಲಿ ಶ್ರೀ ಬಸವೇಶ್ವರರ ಅಂತರಾಷ್ಟ್ರೀಯ ಮ್ಯೂಸಿಯಂನ್ನು ನವದೆಹಲಿಯ ಸ್ವಾಮಿನಾರಾಯಣ ಅಕ್ಷರಧಾಮ ಮಾದರಿಯಲ್ಲಿ ಸ್ಥಾಪಿಸಲು ನಿರ್ಣಯಿಸಲಾಗಿರುತ್ತದೆ. ಹಾಗೆಯೇ, ಮಂಡಳಿಯ ವ್ಯಾಪ್ತಿಯ ಕೂಡಲ ಸಂಗಮ, ಬಸವನ ಬಾಗೇವಾಡಿ ಮತ್ತು ಚಿಕ್ಕ ಸಂಗಮ ಸುಕ್ಷೇತ್ರಗಳ ಅಭಿವೃದ್ಧಿಗಾಗಿ ಮತ್ತು ಬಸವ ಮ್ಯೂಸಿಯಂ ನಿರ್ಮಾಣ ಕಾರ್ಯಕ್ಕಾಗಿ 3 ಹಂತಗಳಲ್ಲಿ ಕಾಮಗಾರಿ ಕೈಗೊಳ್ಳಲು ವಿಸ್ತೃತ ಯೋಜನಾ ವರದಿಯನ್ನು ವಿನ್ಯಾಸಕಾರರಿಂದ ತಯಾರಿಸಿದ್ದು, ಮೊದಲನೆ ಹಂತದಲ್ಲಿ ಕೃಷ್ಣಾ ಭಾಗ್ಯ ಜಲನಿಗಮದ ವತಿಯಿಂದ ರೂ.94.68 ಕೋಟಿ ಮತ್ತು ಸರ್ಕಾರದ ವತಿಯಿಂದ ರೂ.44.93 ಕೋಟಿಗಳು ಒಟ್ಟಾರೆ ಅಂದಾಜು ಸೇರಿ ಒಟ್ಟು ಅಂದಾಜು ರೂ.139.60 ಕೋಟಿಗಳ ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಹ ನಿರ್ಣಯಿಸಲಾಗಿರುತ್ತದೆ.

		ಮೊದಲನೆ ಹಂತದ ಅನುದಾನ ರೂ.139.60 ಕೋಟಿಗಳ ಪೈಕಿ ಕಂದಾಯ ಇಲಾಖೆಯಿಂದ ರೂ.44.93 ಕೋಟಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಕಂಇ 91 ಆರ್‌ಇಹೆಚ್ 2015, ದಿನಾಂಕ: 03.03.2017ರನ್ವಯ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. 2017-18ನೇ ಸಾಲಿನಲ್ಲಿ ರೂ.15.72 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದ್ದು, 2018-19ನೇ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಿರುವ ರೂ.10.05 ಕೋಟಿಗಳ ಅನುದಾನ ಬಿಡುಗಡೆಗೊಳಿಸಲು ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. ಕೂಡಲ ಸಂಗಮ ಮತ್ತು ಚಿಕ್ಕ ಸಂಗಮ ಕ್ಷೇತ್ರಗಳ ಅಭಿವೃದ್ಧಿ ಕಾಮಗಾರಿಗಳ ರೂ.94.68 ಕೋಟಿ ಅನುದಾನದ ಅಂದಾಜು ಮೊತ್ತದ ಡಿ.ಪಿ.ಆರ್. ವರದಿಗೆ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರಿಂದ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಕಾಮಗಾರಿಗಳ ಪ್ರಗತಿ ಅನುಗುಣವಾಗಿ ಮಂಡಳಿಗೆ ಹಂತ-ಹಂತವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುವುದೆಂದು ಮಂಡಳಿಯ ಆಯುಕ್ತರು ವರದಿ ನೀಡಿರುತ್ತಾರೆ.
ಇ	ಈ ಯೋಜನೆಯಲ್ಲಿ ಶರಣಗ್ರಾಮ ನಿರ್ಮಾಣ ಮಾಡುವ ಕಾಮಗಾರಿಯನ್ನು ಸೇರಿಸಿಕೊಳ್ಳಲಾಗಿದೆಯೇ;	ಹೌದು. ಶರಣಗ್ರಾಮ ನಿರ್ಮಾಣ ಮಾಡಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.
ಈ	ಈ ಯೋಜನೆಗೆ ಬಸವಣ್ಣನವರ ಕುರಿತು ಸಂಶೋಧನೆ ಮಾಡಿದ ಕಲಾವಿದರನ್ನು ನೇಮಕ ಮಾಡಲಾಗಿದೆಯೇ;	ಇಲ್ಲ
ಉ	ಯೋಜನೆಯ ಕಾಮಗಾರಿ ಯಾವ ಹಂತದಲ್ಲಿದೆ; ಯೋಜನೆಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ?	ಪ್ರಸ್ತುತ ಮೊದಲನೆ ಹಂತದ ಕಾಮಗಾರಿಗಳನ್ನು ಪ್ರಾರಂಭಿಸಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ತ್ವರಿತವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಸಂಖ್ಯೆ: ಕಂಇ 99 ಆರ್‌ಇಹೆಚ್ 2018

(ಆರ್.ವಿ. ದೇಶಪಾಂಡೆ)
ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 588 ಶಾಕಇ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಸುವರ್ಣಸೌಧ,
ಬೆಳಗಾವಿ, ದಿನಾಂಕ: 12-12-2018

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ,
ಬೆಳಗಾವಿ.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/~~ಪರಿಷತ್ತು~~,
ಸುವರ್ಣಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ ಬಸನಗೌಡ ಪಾಟೀಲ .... ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ:/004 ~~/ನಿಯಮ-73/ /ಗ.ಸೆ.ಸೂ-351~~ ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ ಬಸನಗೌಡ ಪಾಟೀಲ .... ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: /004 ~~/ನಿಯಮ-73/ /ಗ.ಸೆ.ಸೂ-351~~ಕ್ಕೆ ಸಂಬಂಧಿಸಿದ ಉತ್ತರದ 300 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಪಿ.ಎಸ್.ನಾಗರಾಜ್)
ಶಾಖಾಧಿಕಾರಿ,
ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1004
ಸದಸ್ಯರ ಹೆಸರು : ಶ್ರೀ ಶ್ರೀಮಂತ್ ಬಾಳಾಸಾಹೇಬ್ ಪಾಟೀಲ್
ಉತ್ತರಿಸುವ ದಿನಾಂಕ : 14-12-2018
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆಯ ಕಾಗವಾಡ ವಿಧಾನಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮೆಟ್ರಿಕ್ ಪೂರ್ವ ವಸತಿ ನಿಲಯಗಳನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:	ಇಲ್ಲ.
ಆ)	ಹಾಗಿದ್ದಲ್ಲಿ, ಈ ಪ್ರಸ್ತಾವನೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ಮಾಹಿತಿ ನೀಡುವುದು)	ಅನ್ವಯಿಸುವುದಿಲ್ಲ

ಸಂಖ್ಯೆ: ಸಕಇ 588 ಪಕವಿ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಸಕಇ 586 ಶಕಪ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಸುವರ್ಣಸೌಧ,
ಬೆಳಗಾವಿ, ದಿನಾಂಕ: 12-12-2018

<u>ಇವರಿಂದ:</u>

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ,
ಬೆಳಗಾವಿ.

<u>ಇವರಿಗೆ:</u>

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/~~ಪರಿಷತ್ತು~~,
ಸುವರ್ಣಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ ಅಬ್ಬಯ್ಯ ಪ್ರಸಾದ .... ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ:300 /~~ನಿಯಮ-73/~~ /~~ಗ.ಸೆ.ಸೂ-351~~ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ ಅಬ್ಬಯ್ಯ ಪ್ರಸಾದ .... ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ:300 /~~ನಿಯಮ-73/~~ /~~ಗ.ಸೆ.ಸೂ-351ಕ್ಕೆ~~ ಸಂಬಂಧಿಸಿದ ಉತ್ತರದ 300 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಪಿ.ಎಸ್.ನಾಗರಾಜ್)
ಶಾಖಾಧಿಕಾರಿ,
ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	300
ಸದಸ್ಯರ ಹೆಸರು	:	ಶ್ರೀ ಅಬ್ಬಯ್ಯ ಪ್ರಸಾದ್
ಉತ್ತರಿಸುವ ದಿನಾಂಕ	:	14.12.2018
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಹುಬ್ಬಳ್ಳಿ ಧಾರವಾಡ ನಗರದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಗಳನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ; ಇದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?	ಈ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಸಕಇ 586 ಪಕವಿ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 364 SLP 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಸುವರ್ಣ ಸೌಧ,
ಬೆಳಗಾವಿ ದಿನಾಂಕ: 18-12-2018

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ,
ಬೆಳಗಾವಿ.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/~~ಪರಿಷತ್ತು~~,
ಸುವರ್ಣಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ ಅಮರೇಗೌಡ ಎಲ್. ಪಾಟೀಲ ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1426 /~~ನಿಯಮ-73/ /ಗ.ಸೆ.ಸೂ-351~~ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ ಅಮರೇಗೌಡ ಎಲ್. ಪಾಟೀಲ ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1426 ~~/ನಿಯಮ-73/ /ಗ.ಸೆ.ಸೂ-351~~ಕ್ಕೆ ಸಂಬಂಧಿಸಿದ ಉತ್ತರದ 300 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಪಿ.ಎನ್.ನಾಗರಾಜ್)
ಶಾಖಾಧಿಕಾರಿ,
ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1426
ಸದಸ್ಯರ ಹೆಸರು : ಶ್ರೀ ಅಮೀನಪ್ಪಗೌಡ ಎಸ್.ಪಾಟೀಲ್
ಉತ್ತರಿಸುವ ದಿನಾಂಕ : 14.12.2018
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2018-19ನೇ ಸಾಲಿಗೆ ರಾಜ್ಯದಲ್ಲಿ ಕಾಲೋನಿ ಅಭಿವೃದ್ಧಿ ಯೋಜನೆ/ಪ್ರಗತಿ ಕಾಲೋನಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ/ಪಂಗಡ ಕಾಲೋನಿಗಳ ಮೂಲಭೂತ ಸೌಕರ್ಯಕ್ಕೆ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; (ಅಂಕಿ-ಅಂಶ ಸಮೇತ ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)</td><td>ವಿವರಗಳನ್ನು ಅನುಬಂಧದಲ್ಲಿ ನೀಡಿದೆ.</td></tr>
<tr><td>ಆ)</td><td>ಈ ಯೋಜನೆಯಡಿ ವಿಜಯಪುರ ಜಿಲ್ಲೆಯ ಯಾವ ಯಾವ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಅನುದಾನ ನೀಡಲಾಗಿದೆ; (ಅಂಕಿ-ಅಂಶ ಸಮೇತ ವಿವರ ನೀಡುವುದು)</td><td>ವಿಜಯಪುರ ಜಿಲ್ಲೆಯ ಈ ಕೆಳಕಂಡ ವಿಧಾನಸಭಾ ಕ್ಷೇತ್ರಗಳಿಗೆ ಕಾಲೋನಿ ಅಭಿವೃದ್ಧಿ ಯೋಜನೆ/ಪ್ರಗತಿ ಕಾಲೋನಿ ಯೋಜನೆ ಅಡಿಯಲ್ಲಿ ಬಿಡುಗಡೆ ಮಾಡಿದ ಅನುದಾನದ ವಿವರ ಕೆಳಕಂಡಂತಿದೆ. (ರೂ.ಲಕ್ಷಗಳಲ್ಲಿ)
<table>
<tr><th rowspan="2">ಕ್ರ.ಸ</th><th rowspan="2">ವಿಧಾನ ಸಭಾ ಕ್ಷೇತ್ರ</th><th colspan="2">ಪರಿಶಿಷ್ಟ ಜಾತಿ</th><th colspan="2">ಪರಿಶಿಷ್ಟ ಪಂಗಡ</th></tr>
<tr><th>ಹಂಚಿಕೆ</th><th>ಬಿಡುಗಡೆ</th><th>ಹಂಚಿಕೆ</th><th>ಬಿಡುಗಡೆ</th></tr>
<tr><td>1.</td><td>ನಾಗಠಾಣ (ಎಸ್.ಸಿ)</td><td>150.00</td><td>150.00</td><td>50.00</td><td>42.86</td></tr>
<tr><td>2.</td><td>ಬಬಲೇಶ್ವರ</td><td>100.00</td><td>100.00</td><td>50.00</td><td>42.86</td></tr>
<tr><td>3.</td><td>ಇಂಡಿ</td><td>100.00</td><td>100.00</td><td>50.00</td><td>42.86</td></tr>
<tr><td>4.</td><td>ಬಸವನ ಬಾಗೇವಾಡಿ</td><td>100.00</td><td>100.00</td><td>50.00</td><td>42.86</td></tr>
<tr><td>5.</td><td>ಸಿಂಧಗಿ</td><td>75.00</td><td>75.00</td><td>25.00</td><td>21.43</td></tr>
<tr><td colspan="2">ಒಟ್ಟು</td><td>525.00</td><td>525.00</td><td>225.00</td><td>192.87</td></tr>
</table></td></tr>
